**(ಇಂದು ದಿನಾಂಕ 15-09-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಪಾಟೀ ಸವಾಲುಃ ಪ್ರತಿವಾದಿ ಪರ ಆರ್ ಜಿ ಎನ್ ವಕೀಲರಿಂದ**

ಈ ದಾವೆಯನ್ನು ಪಾಲು ವಿಬಾಗ ಕೇಳಿ ಸಲ್ಲಿಸಿರುತ್ತೆವೆ. ನನ್ನ ತಂದೆ ಹೆಸರು ಶಂಕ್ರಪ್ಪ ಬೀಮಪ್ಪ ಮನಸೂರು ಎಂದರೆ ಸರಿ. ನನ್ನ ತಂದೆಗೆ 5 ಜನ ಸಹೋದರರು ಮಕ್ಕಳು, 4 ಜನ ಸಹೋದರಿ ಎಂದರೆ ಸರಿ. ನಮ್ಮ ಮನೆತನದ ಮೂಲ ಪುರುಷ ಬೀಮಪ್ಪ @ ಬೀಮರಾಯಪ್ಪ ಮನಸೂರ @ ಯರಿಹಕ್ಕಲ ಎಂದರೆ ಸರಿ. ಬೀಮಪ್ಪ ಹೆಂಡತಿ ಹೆಸರು ಗೀರಿಜಾ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನುನ ಹೊರತು ಪಡಿಸಿ ಸರ್ವೇ ನಂ.21 ಬಿ, 30, 36, 47/1, 47/3, 49/1, 62/2, 121, 153/1 ಎ 1, 155 ಆಸ್ತಿಗಳು ನಮ್ಮ ಕುಟುಂಬದ ಆಸ್ತಿಗಳಾಗಿರುತ್ತವೆ ಎಂದರೆ ಸರಿ. ಸದರಿ ದಾವೆಯಲ್ಲಿ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿ ಪಾಲು ವಿಬಾಗ ಕೇಳಿರುವುದಿಲ್ಲ. ಕಾರಣ ಅವುಗಳನ್ನು ಮಾರಾಟ ಮಾಡಲಾಗಿರುತ್ತದೆ. ಮೇಲೆ ಹೇಳಿದ ಆಸ್ತಿಗಳು ರೈತನಾತೆಯ ಆಸ್ತಿಗಳು ಎಂದರೆ ಸರಿಯಲ್ಲ. ಸರ್ವೇ ನಂ.62, 49, 121, 153 ಆಸ್ತಿಗಳು ಕಲ್ಲಪ್ಪ ಬೀಮಪ್ಪ ಮನಸೂರ ಅವರ ಸ್ವಯಾರ್ಜಿತ ಆಸ್ತಿಗಳಾಗಿರುತ್ತವೆ. ಸದರಿ ಆಸ್ತಿಗಳು ಕಲ್ಲಪ್ಪ ನ ಸ್ವಯಾರ್ಜಿತ ಆಸ್ತಿಗಳು ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಕಲ್ಲಪ್ಪ ನನ್ನ ದೊಡಪ್ಪ. ಕಲ್ಲಪನಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ. 33 ನೇ ಪ್ರತಿವಾದಿ ಕೀರಣ ದತ್ತಕ ತಂದೆ ಕಲ್ಲಪ್ಪ ಮನಸೂರ ಎಂದು ನಾವೇ ನಮೂದಿಸಿರುತ್ತೆವೆ ಎಂದರೆ ಸರಿ. ಕಲ್ಲಪ್ಪನ ಹೆಸರಿನಲ್ಲಿ ಜಮೀನುಗಳನ್ನು ಕಲ್ಲಪ್ಪ ನ ಹೆಸರಿನಲ್ಲಿ ಕುಟುಂಬದ ಪರವಾಗಿ ಮಂಜೂರು ಮಾಡಿದ್ದರು ಎಂದರೆ ಸರಿಯಲ್ಲ. ಫಾರ್ಮ ನಂ.7 ಮತ್ತು 10 ಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಉಳಿದವರ ಹೋರಗೆಡ ಇದ್ದ ಕಾರಣ ಕಲ್ಲಪ್ಪ ಮಾತ್ರ ಸಾಗುವಳಿ ಮಾಡುತ್ತಿದ್ದನು. ಕಲ್ಲಪ್ಪ ಸರ್ವೆ ನಂ.49/1, 62, 121 ಜಮೀನುಗಳು ಮತ್ತು ಮನೆ ಸಂ.106 ಆಸ್ತಿಗಳ ಕುರಿತು ಮೃತ್ಯು

ಪತ್ರ ಬರೆದಿದ್ದರು. ಕಲ್ಲಪ್ಪನ ಸ್ವಯಾರ್ಜಿತ ಆಸ್ತಿಗಳು ಅಲ್ಲದೆ ಇರುವ ಕಾರಣ ಅವರಿಗೆ ಮೃತ್ಯು ಪತ್ರ ಬರೆಯುವ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಗಳು ಕಲ್ಲಪ್ಪ ಖರೀದಿಸಿದ ಆಸ್ತಿ ಮತ್ತು ಆತ ಕಟ್ಟಿಸಿದ ಮನೆ ಆಗಿರುತ್ತದೆ. ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಮೃತ್ಯು ಪತ್ರ 2011 ರಲ್ಲಿ ಬರೆಯಲಾಗಿರುತ್ತದೆ. ಮೃತ್ಯು ಪತ್ರವನ್ನು ನನ್ನ ಹೆಸರಿನಲ್ಲಿ ಬರೆದಿರುತ್ತಾರೆ. ಮೃತ್ಯು ಪತ್ರವನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ. ನಾನು ಮೃತ್ಯು ಪತ್ರವನ್ನು ಶೃಸ್ಟಿಸಿರುತ್ತೇನೆ ಎಂದರೆ ಸರಿಯಲ್ಲ. 14 ನೇ ಪ್ರತಿವಾದಿ ಶಾಂತರಾಜ ಅವರು OS No. 132/2015 ಎಂದು ದಾಖಲಿಸಿದ್ದರು ಎಂದರೆ ಸರಿ. 15 ನೇ ಪ್ರತಿವಾದಿ ಎಲ್ಲಾ ಆಸ್ತಿಗಳ ಮೇಲೆ OS No.149/2016 ಎಂದು ದಾಖಲಿಸಿದ್ದರು ಎಂದರೆ ಸರಿ. ಪ್ರತಿವಾದಿ 6 ಮತ್ತು 34 ರಿಂದ 47 ನಮ್ಮ ಕುಟುಂಬದ ಸದಸ್ಯರು ಅಲ್ಲ ಎಂದರೆ ಸರಿ. ನನ್ನ ವಾದ ಪತ್ರದಲ್ಲಿ ಮತ್ತು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಗಳು ಮೃತ್ಯು ಪತ್ರದ ಪ್ರಕಾರ ಬಂದಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ಪ್ರತಿವಾದಿ 1 ರಿಂದ 5, 7 ರಿಂದ 33, 38 ಇವರಿಗೆ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಮತ್ತು ನಮ್ಮ ಕುಟುಂಬದ ಆಸ್ತಿಗಳಲ್ಲಿ ಈ ವರೆಗೆ ಪಾಲು ವಿಬಾಗ ಆಗಿಲ್ಲ ಎಂದರೆ ಸರಿ. ಪ್ರತಿವಾದಿ ಆಸ್ತಿಯನ್ನು ಎತ್ತಿಹಾಕುವ ಉದ್ದೇಶದಿಂದ 2 ಆಸ್ತಿಗಳನ್ನು ತೋರಿಸಿ ಸುಳ್ಳು ದಾವೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಕಲ್ಲಪ್ಪ ಮಾಡಿದ ಮೃತ್ಯು ಪತ್ರದಲ್ಲಿ ನನಗೆ ಪಾಲು ಕೇಳಲು ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ವಾದ ಪತ್ರದಲ್ಲಿ ಕೇಳಿದ ಪರಿಹಾರಕ್ಕೆ ಅರ್ಹನಾಗಿರುವುದಿಲ್ಲ ಎಂದರೆ ಸರಿಯಲ್ಲ.

ಇತರ ವಕೀಲರ ಪರ ಪಾಟೀ ಸವಾಲಿಗೆ ಸಮಯಕೋರಿದ್ದರಿಂದ ಪಾಟೀ ಸವಾಲನ್ನು ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.